# 1 ನೇ ಹೆಚ್ಚುವರಿ ಸತ್ರ ಮತ್ತು ವಿಶೇಷ ನ್ಯಾಯಾಲಯ, ಚಿಕ್ಕಮಗಳೂರು

## ಸ್ಪೆಷಲ್ ಮೊಕದ್ದಮೆ ನಂಃ 153/2019

| | | |
|---|---|---|
| ಸಾಕ್ಷಿದಾರರ ಹೆಸರು | - ಅಶ್ರಫ್ | ಪಿಡಬ್ಲ್ಯೂ- 03 |
| ತಂದೆಯ ಹೆಸರು | - ಅಬ್ದುಲ್ ರೆಹಮಾನ್ | ಸಿಡಬ್ಲ್ಯೂ -07 |
| ವಯಸ್ಸು | - 48 ವರ್ಷ | |
| ಉದ್ಯೋಗ | - ಹೋಟೆಲ್ ಮಾಲೀಕ | |
| ವಾಸ ಸ್ಥಳ | - ಸಖರಾಯಪಟ್ಟಣ | |

ದಿನಾಂಕಃ 13-02-2026 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ-

**1.** ನ್ಯಾಯಾಲಯದಲ್ಲಿ ಹಾಜರಿರುವ 2 ಮತ್ತು 3 ನೇ ಆರೋಪಿತರು ಯಾರೆಂದು ನನಗೆ ಗೊತ್ತಿಲ್ಲ. ಚಾಸಾ.1, ಫ್ರಾಸಾ.1 ಮತ್ತು 2 ರವರು ನನಗೆ ಗೊತ್ತಿಲ್ಲ.

**2.** ಆರೋಪಿತರಿಂದ ಚಾಸಾ.1 ರವರಿಗೆ ಏನು ತೊಂದರೆಯಾಗಿದೆ ಎಂದು ನನಗೆ ಗೊತ್ತಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ಪೊಲೀಸರು ನನ್ನನ್ನು ವಿಚಾರಿಸಿಲ್ಲ ಮತ್ತು ನಾನು ಅವರಿಗೆ ಯಾವುದೇ ಹೇಳಿಕೆಯನ್ನು ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ-</u>

3. ನಾನು ಕೆ.ಎಂ. ರಸ್ತೆಯ ಪಕ್ಕದಲ್ಲಿ ಅಲ್ಫಾ ಎಂಬ ಹೆಸರಿನ ಹೋಟೆಲನ್ನು ಇಟ್ಟುಕೊಂಡು ವ್ಯಾಪಾರ ಮಾಡುತ್ತಿದ್ದೇನೆ ಎಂದರೆ ಸರಿ. ದಿಃ 22-07-2019 ರಂದು ನನಗೆ ಪರಿಚಯವಿದ್ದ ಆಶೀಫ್ ರವರ ಮದುವೆ ರಿಸ್ಪಷನ್ ಇದ್ದ ಕಾರಣ ಮಧ್ಯಾಹ್ಣ 2.45 ಗಂಟೆಗೆ ಹೋಗುತ್ತಿದ್ದಾಗ ಚಾಸಾ.1 ಮತ್ತು 2 ನೇ ಆರೋಪಿ ಪಾವನ ವೈನ್ ಶಾಪ್ ಬಳಿ ಹೋಗುವುದನ್ನು ನೋಡಿದೆನು ಎಂದರೆ ಸರಿಯಲ್ಲ. ನಂತರ ಮಧ್ಯಾಹ್ಣ 3 ಗಂಟೆ ಸಮಯಕ್ಕೆ ಚಾಸಾ.1 ರವರ ತಮ್ಮನಾದ 1 ನೇ ಆರೋಪಿ ಕೈಯಲ್ಲಿ ಕತ್ತಿ ಹಿಡಿದುಕೊಂಡು ಜೋರಾಗಿ ನನ್ನ ಮುಂದೆ ಹೋದನು ಎಂದರೆ ಸರಿ. ಆಗ 2 ನೇ ಆರೋಪಿ 1 ನೇ ಆರೋಪಿಯನ್ನು ಕುರಿತು 3 ನೇ ಆರೋಪಿ ಹೇಳಿದಂತೆ ಚಾಸಾ.1 ರವರನ್ನು ಕರೆದುಕೊಂಡು ಬಂದಿದ್ದೇನೆ ಇವನನ್ನು ಬಿಡಬೇಡ ಮುಗಿಸಿಬಿಡು ಎಂದು ಹೇಳಿದನು ಎಂದರೆ ಸರಿಯಲ್ಲ.

4. ಆಗ 1 ನೇ ಆರೋಪಿ ಚಾಸಾ.1 ರವರಿಗೆ ಕತ್ತಿಯಿಂದ ಅವರ ತಲೆಯ ಹಿಂಭಾಗಕ್ಕೆ ಕಡಿದನು ಎಂದರೆ ಸರಿಯಲ್ಲ. ಚಾಸಾ.1 ರವರು ಕೆಳಗೆ ಬಿದ್ದು ನೋವಿನಿಂದ ಕಿರುಚಾಡಿದಾಗ 2 ನೇ ಆರೋಪಿ ಈಗ ಬಿಡಬೇಡ ಮುಗಿಸು ಎಂದು ಹೇಳಿದಾಗ 1 ನೇ ಆರೋಪಿ ಅದೇ ಕತ್ತಿಯಿಂದ ಚಾಸಾ.1 ರವರ ಎಡಭುಜ, ಹೊಟ್ಟೆ 2 ಕಾಲಿನ ತೊಡೆಯ ಬಳಿ ಕಡಿದನು ಎಂದರೆ ಸರಿಯಲ್ಲ. ಗಲಾಟೆಯ ಶಬ್ಧವನ್ನು ಕೇಳಿ ಫ್ರಾಸಾ.1 ರವರು ಓಡಿ

ಬಂದರು ಎಂದರೆ ಸರಿಯಲ್ಲ. ನಾನು ಪ್ರಾಸಾ.1 ರವರ ಜೊತೆ ಜಗಳ ಬಿಡಿಸಲು ಹೋದೆನು ಎಂದರೆ ಸರಿಯಲ್ಲ. ಆಗ 1 ನೇ ಆರೋಪಿ ನಮ್ಮನ್ನು ನೋಡಿ ತನ್ನ ಕೈಯಲ್ಲಿದ್ದ ಕತ್ತಿಯನ್ನು ಕೆಳಗೆ ಬಿಸಾಡಿ 2 ನೇ ಆರೋಪಿಯೊಂದಿಗೆ ಹೋಗುತ್ತಾ ಚಾಸಾ.1 ರವರನ್ನು ಕುರಿತು, ಇವತ್ತು ಬದುಕಿ ಬಿಟ್ಟೆ ಇನ್ನೊಂದು ದಿನ ಸಿಕ್ಕು ನಿನ್ನನ್ನು ಕೊಲೆ ಮಾಡದೇ ಬಿಡುವುದಿಲ್ಲ ಎಂದು ಹೇಳಿ ಹೋದರು ಎಂದರೆ ಸರಿಯಲ್ಲ. ಸ್ವಲ್ಪ ಸಮಯಕ್ಕೆ ಚಾಸಾ.9 ಮತ್ತು 10 ರವರು ಅಲ್ಲಿಗೆ ಬಂದರು ಎಂದರೆ ಸರಿಯಲ್ಲ.

5. ಗಾಯಗೊಂಡಿದ್ದ ಚಾಸಾ.1 ರವರನ್ನು ಸಖರಾಯಪಟ್ಟಣ ಆಸ್ಪತ್ರೆಗೆ ತೋರಿಸಿ ಅಲ್ಲಿನ ವೈದ್ಯರ ಸಲಹೆಯಂತೆ ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲು ಮಾಡಿದ್ದಾಗಿ ತಿಳಿಯಿತು ಎಂದರೆ ಸರಿಯಲ್ಲ. ಚಾಸಾ.1 ರವರು ಸದರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ ಆರೋಪಿತರ ವಿರುದ್ಧ ಪೊಲೀಸರಿಗೆ ದೂರು ಕೊಟ್ಟ ವಿಚಾರ ತಿಳಿಯಿತು ಎಂದರೆ ಸರಿಯಲ್ಲ.

6. ದಿಃ 06-08-2019 ರಂದು ಪೊಲೀಸರು ನನ್ನನ್ನು ವಿಚಾರಿಸಿದ್ದಾರೆ ಎಂದರೆ ಸರಿಯಲ್ಲ. ಆಗ ನಾನು ಅವರಿಗೆ ಮೇಲಿನ ವಿಚಾರಗಳನ್ನು ತಿಳಿಸಿ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಸದರಿ ಹೇಳಿಕೆಯನ್ನು ನಿಪಿ.5 ಎಂದು ಗುರುತಿಸಲಾಯಿತು.

7. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ಘಟನೆಯ ಬಗ್ಗೆ ಮಾಹಿತಿ ಇದ್ದು ಆ ಬಗ್ಗೆ ಪೊಲೀಸರಿಗೆ ನಿಪಿ.5

ರಂತೆ ಹೇಳಿಕೆಯನ್ನು ನೀಡಿದ್ದರೂ ಸಹ ಈಗ ಆರೋಪಿತರೊಂದಿಗೆ ಶಾಮೀಲಾಗಿ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಪಾಟೀ ಸವಾಲು: ಆರೋಪಿತರ ಪರ ವಕೀಲರು ಸಾಕ್ಷಿಯ ಪಾಟೀ ಸವಾಲು ಇಲ್ಲವೆಂದು ನುಡಿದಿರುತ್ತಾರೆ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ